# ಒಂದು ಮರ ಹಲವು ಸ್ವರ

ಇದು ಮಹಿಳೆಯರ ಬರಹಗಳಿಂದ ರೂಪುಗೊಂಡಿರುವ ವಿಶೇಷ ಸಂಚಿಕೆಯಾಗಿದೆ. ಇದಕ್ಕೆ ಕನ್ನಡದ ಪ್ರತಿಭಾಶಾಲಿ ಲೇಖಕಿಯರು ಬರೆದಿದ್ದಾರೆ. ಇದು ಒಂದು ಮರವಾಗಿ ಹಲವು ಸ್ವರಗಳಿರುವ ಅತಿಮಧುರ ಬರಹಗಳನ್ನು ಒಳಗೊಂಡಿದೆ. ಗದ್ದಲದ, ಹಿಂಸೆಯ, ಉದ್ವಿಗ್ನತೆಯ ಜಗತ್ತಿನಲ್ಲಿ ಹೆಣ್ಣುಮಕ್ಕಳ ದನಿಗಳನ್ನು ಸಾವಧಾನದಿಂದ, ಸಮಾಧಾನದಿಂದ ಆಲಿಸುವಂತೆ ಒತ್ತಾಯಿಸುವ ಬರಹಗಳು ಇಲ್ಲಿವೆ. ತನ್ನ ಚಿಂತನೆ, ಬದುಕಿನ ರೀತಿಯಲ್ಲಿ ಗಂಡಿಗಿಂತ ತೀರ ಭಿನ್ನಳಾಗಿರುವ ಹೆಣ್ಣಿನ ಅಭಿವ್ಯಕ್ತಿ ಬೇರೆಯದೇ ಬಗೆಯದು. ಅದರ ಬಣ್ಣ, ಸಂಗೀತ, ದನಿ–ಬನಿ, ತಾಕುವಿಕೆ ಬೇರೆ. ಅದರ ಮೂಲ ಸಂವೇದನೆ ಮಮತೆಯದು ಮತ್ತು ಘನತೆಯದು. ಅಲ್ಲಿ ಅಬ್ಬರ, ಉಬ್ಬರಗಳಿಲ್ಲ. ಈ ಸಂಚಿಕೆಯ ಕತೆಗಳು ಬದುಕನ್ನು ಕಟ್ಟುವಂತಹ ವಿವೇಕದ ಎಳೆಗಳನ್ನು ನೇಯ್ದು ಓದುಗರ ಎದುರಿಗಿಟ್ಟಿವೆ.

ಕತೆಗಳು ಈ ಸಂಚಿಕೆಯಲ್ಲಿ ಯಾಕೆ ಮುಖ್ಯವಾಗಿ ಜಾಗಪಡೆದಿವೆ ಎಂಬುದಕ್ಕೆ ಕಾರಣವಿದೆ. ಜಗತ್ತಿನಲ್ಲಿ ಹೆಣ್ಣೇ ಮೊದಲ ಸಲ ಕತೆಗಳನ್ನು ಕಟ್ಟಿದ್ದು, ಹೆಣೆದು ಮಕ್ಕಳಿಗೆ ಹೇಳಿದ್ದು. ಕತೆಗಳಿಗೆ ಆದಿ ಹೆಣ್ಣೇ ಆಗಿದ್ದಾಳೆ. ಈ ಕಲೆಯನ್ನು ಅವಳಿಗೆ ಯಾರೂ ಕಲಿಸಬೇಕಿಲ್ಲ. ಮಕ್ಕಳು ಮೊದಲಿಗೆ ಕೇಳಿದ ಕತೆ ಅವರ ತಾಯಿಯ ಬಾಯಿಂದಲೇ ಬಂದಿರುತ್ತದೆ. ಆ ಕತೆಗಳು ಮಾನವೀಯತೆ, ಸಹಬಾಳ್ವೆ, ಸಮತೆ ಹಾಗೂ ಬದುಕನ್ನು ಎದುರಿಸಲು ಬೇಕಾದ ಛಲವನ್ನು ಕಲಿಸುತ್ತವೆ. ಈಗೀಗ ಕತೆಗಳನ್ನು, ಹಾಡುಗಳನ್ನು ಮಕ್ಕಳಿಗೆ ಊಡುವ ತಾಯಂದಿರೂ ಕಡಿಮೆಯಾಗುತ್ತಿದ್ದಾರೆ. ಆಧುನಿಕ ಜಗತ್ತಿನಲ್ಲಿ ಹೆಣ್ಣುಮಕ್ಕಳು ಗಂಡುಮಕ್ಕಳಿಗೆ ಸರಿಸಮಾನವಾಗಿ ಬದುಕಿನ ಸ್ಪರ್ಧೆಯಲ್ಲಿದ್ದಾರೆ. ಕುಟುಂಬದ ನಿರ್ವಹಣೆಯಲ್ಲಿ ಬೇರೆಯದೇ ಆದ ಸವಾಲುಗಳನ್ನು ಅವರು ಎದುರಿಸುತ್ತಿದ್ದಾರೆ. ಬದುಕಿನಲ್ಲಿ ಆಗುತ್ತಿರುವ ಪಲ್ಲಟಗಳಿಂದ ಹೆಣ್ಣಿನ ಅನುಭವಲೋಕ ಸಂಕೀರ್ಣವಾಗುತ್ತಿದೆ. ಹಾಗಾಗಿ ಮಕ್ಕಳ ಭಾವಕೋಶಗಳನ್ನು ಬೆಳೆಸಬೇಕಿದ್ದ, ಬೆಳಗಬೇಕಿದ್ದ ಅಮ್ಮ ಹೇಳುವ ಕತೆಗಳು ಇಲ್ಲವಾಗುತ್ತಿವೆ.



ನಿಸ್ಸಂದೇಹವಾಗಿ ಈಗಿನ ಹೆಣ್ಣಿನ ಸಂವೇದನೆ ಬೇರೆಯದು. ಹೆಣ್ಣು ಜಾಹೀರಾತು, ಸಿನಿಮಾಗಳಲ್ಲಿ ಮಾರಾಟದ ಸರಕಾಗಿ ಕಾಣಿಸಿಕೊಂಡು ಬಹಳ ಕಾಲವಾಯಿತು. ಗಂಡಿನ ದೃಷ್ಟಿಕೋನಕ್ಕೆ, ಅವನು ಹಾಕಿದ ಚೌಕಟ್ಟಿಗೆ ತಕ್ಕಂತೆ ಹೆಣ್ಣು ಬಳಕೆಯಾಗುವುದು, ಕಾಣಿಸಿಕೊಳ್ಳುವುದು, ರೂಪುಗೊಳ್ಳುವುದು ಈಗಲೂ ನಿಂತಿಲ್ಲ. ಇದೂ ಒಂದು ಬಗೆಯ ಶೋಷಣೆ. ಮಹಿಳೆಯರು ಕೇಳುವ ಸಮಾನತೆ ಇನ್ನೂ ಅವರಿಗೆ ಸಿಕ್ಕಿಲ್ಲ. ಬದಲಾಗಿ ಆಧುನಿಕ ಜಗತ್ತು ಹೆಚ್ಚು ಹೆಚ್ಚು ಕ್ರೂರವಾಗುತ್ತಿದೆ. ಹೆಣ್ಣನ್ನು ಸುತ್ತುವರಿದಿರುವ ಪಾಶಗಳು ಇನ್ನಷ್ಟು ಬಿಗಿಯಾಗುತ್ತಿವೆ. ಡಿಜಿಟಲ್ ಯುಗ ಅವಳನ್ನು ಇನ್ನಷ್ಟು ಕಟ್ಟಿಹಾಕುತ್ತಿದೆ, ಬಳಕೆಯ ವಸ್ತುವಾಗಿಸುತ್ತಿದೆ. ಇವೆಲ್ಲವನ್ನೂ ಒಳಗೊಳ್ಳುವ ಭಿನ್ನ ನುಡಿಗಟ್ಟಿನ ಬರಹಗಳು ಕನ್ನಡದಲ್ಲಿ ಬರುತ್ತಿರುವುದು ಕಡಿಮೆ.

ವಿಮರ್ಶಕಿ ಎಂ.ಎಸ್. ಆಶಾದೇವಿ ಅವರ ಸಂದರ್ಶನ ಈ ಬಾರಿಯ ವಿಶೇಷ. ಸ್ತ್ರೀವಾದ ಅವರಿಗೆ ಮಾನವೀಯತೆಯದು ಮತ್ತು ಅಂತಃಕರಣದ್ದಾಗಿದೆ. ಅವರ ಈ ವಿಶಿಷ್ಟ ಅಂಶ ಬದುಕು, ಸಾಹಿತ್ಯವನ್ನು ನೋಡುವ ಹೊಸ ನೋಟಗಳನ್ನು ಕೊಡುವಂತಿದೆ.

**ಸಂದೀಪ ನಾಯಕ**